ಶ್ರೀ ಷಫಿ ಅಹಮದ್ : ಕಳೆದ ಸಾರಿ ಕೇಳಿದ ಅನೇಕ ಪ್ರಶ್ನೆಗಳಿಗೆ ನಮಗೆ ಉತ್ತರ ಬಂದಿಲ್ಲ. ಲಗತ್ತಿಸಿರುತ್ತದೆಂದು ಹೇಳುತ್ತಾರೆ. ಆದರೂ ಉತ್ತರ ಬಂದಿರುವುದಿಲ್ಲ. ಇದರ ಬಗ್ಗೆ ತಾವು ವಿಚಾರ ಮಾಡಬೇಕು. ಕಳೆದ ಸಾರಿ ಡೆಫರ್ ಆದಂತಹ ಪ್ರಶ್ನೆಗಳಿಗೂ ಕೂಡ ಉತ್ತರ ಸಿಕ್ಕಿಲ್ಲ.

ಅಧ್ಯಕ್ಷರು : ಆಗಬಹುದು.

ಶ್ರೀ ಯು.ಕೆ. ಶಾಮಣ್ಣ : ನಾವು ಪ್ರಶ್ನೆಗಳನ್ನು ಕೇಳಿದರೆ ಅವುಗಳಿಗೆ ಉತ್ತರಗಳು ಬರುತ್ತಿಲ್ಲ. ಇನ್ನು ಕೆಲವೊಮ್ಮೆ ಪ್ರಶ್ನೆಗಳೇ ಇಲ್ಲಿ ಬರುವುದಿಲ್ಲ. ಯಾವ ರೀತಿಯಿಂದ ಲಾಟರಿಯನ್ನು ಮಾಡುತ್ತಾರೆಂದು ಸ್ವಲ್ಪ ವಿಚಾರ ಮಾಡಬೇಕು.

ಅಧ್ಯಕ್ಷರು : ಪ್ರತಿ ದಿವಸ ಮುಂದಿನ ವಾರದ ಪ್ರಶ್ನೆಗಳಿಗೆ ಲೆಜಿಸ್ಲೇಚರ್ ಸೆಕ್ರೆಟರಿಯೇಟ್ ನೋಟೀಸ್ ಆಫೀಸಿನಲ್ಲಿ ಡ್ರಾ ನಡೆಯುತ್ತದೆ ಎಲ್ಲಾ ಸದಸ್ಯರು ಡ್ರಾ ನಡೆಯತಕ್ಕಂತಹ ಕಾಲದಲ್ಲಿ ಹೋಗಿ ನೋಡಬಹುದು. ಅದನ್ನು ನನ್ನ ಮುಂದೆ ಹೇಳಿದರೆ ಏನೂ ಪ್ರಯೋಜನವಾಗುವುದಿಲ್ಲ.

ii) ವಿಷಯ : ತುಮಕೂರು ರಸ್ತೆಯಲ್ಲಿ ಮ್ಯಾಕ್‌ಡೆವೆಲ್ ವಿಸ್ಕಿ ಸಾಗಿಸುತ್ತಿದ್ದ 13 ಲಾರಿಗಳಿಂದ 35 ಲಕ್ಷ ರೂಪಾಯಿ ತೆರಿಗೆ ವಂಚನೆ

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ ನಿನ್ನೆ ದಿನ ರಾತ್ರಿ 11.30ಕ್ಕೆ ನಾವು ನಾಲ್ವರು ಶಾಸಕರು ತುಮಕೂರು ರಸ್ತೆಯಲ್ಲಿರುವ ಸೇಲ್ಸ್ ಟ್ಯಾಕ್ಸ್ ಗೇಟ್ ಹತ್ತಿರ ಹೋಗಿದ್ದೆವು. ಎರಡು ದಿವಸದಿಂದ ಸುಮಾರು 35 ಲಕ್ಷ ರೂಪಾಯಿಗಳ ತೆರಿಗೆ ವಂಚನೆಯಾಗುತ್ತಿರತಕ್ಕಂತಹ ಒಂದು ಪ್ರಕರಣ ಇಲ್ಲಿ ಆಗಿದೆ.

ಅಧ್ಯಕ್ಷರು : ಬರೆದು ಕಳಿಸಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮ್ಯಾಕ್‌ಡೆವೆಲ್ ವಿಸ್ಕಿ ಇರುವ 13 ಲಾರಿಗಳು ಪೂನಾದಿಂದ ಬಂದಿದೆ. ಅವನ್ನು ಹಿಡಿದಿದ್ದು 2 ದಿವಸದಿಂದ ಹಾಗೇ ಇದೆ. ಅದು ಸುಮಾರು 35 ಲಕ್ಷ ರೂಪಾಯಿ ಬೆಲೆ ಬಾಳುತ್ತದೆ. ಇದರ ಬಗ್ಗೆ ತನಿಖೆ ಮಾಡಬೇಕು.

ಅಧ್ಯಕ್ಷರು : ಆ ವಿಚಾರವನ್ನು ನನ್ನ ಗಮನಕ್ಕೆ ತಂದು ಹೇಳಿದೀರಾ? ಇಂತಹ ವಿಚಾರಗಳನ್ನು ಇಲ್ಲಿ ತರುವಂತಹ ನಿಮ್ಮ ಉದ್ದೇಶ ನಮಗೆ ಅರ್ಥವಾಗುತ್ತದೆ. ಇಂತಹ ವಿಚಾರಗಳು ಬಂದಾಗ ಪೂರ್ವಭಾವಿಯಾಗಿ ನನ್ನನ್ನು ಕಂಡು ಮೊದಲೇ ಹೇಳಬೇಕಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಗೊತ್ತಾಯಿತು. ಇದು 65 ಲಕ್ಷ ರೂಪಾಯಿ ಬೆಲೆ ಬಾಳುವಂಥಾದ್ದು ಇದೆ. 35 ಲಕ್ಷ ರೂಪಾಯಿಗಳ ತೆರಿಗೆ ವಂಚನೆಯಾಗುತ್ತಿದೆ. ಮಾನ್ಯ ಎಕ್ಸೈಸ್ ಮಂತ್ರಿಗಳು ಇದ್ದಾರೆ. ಆ ಲಾರಿಗಳಿಗೆ ಟ್ರಾನ್ಸಿಟ್ ಪಾಸ್ ಕೊಡಿಸಿ ಮೋಸ ಮಾಡುವಂಥಾದ್ದು ನಡೆಯುತ್ತಿದೆ. ತುಮಕೂರು ರೋಡಿನಲ್ಲಿ 13 ಲಾರಿಗಳನ್ನು ಹಿಡಿದಿಟ್ಟಿದ್ದಾರೆ. ಅವುಗಳಲ್ಲಿ ಮ್ಯಾಕ್‌ಡೆವೆಲ್ ವಿಸ್ಕಿ ಇದೆ. ಅದು 65 ಲಕ್ಷ ರೂಪಾಯಿ ಬೆಲೆ ಬಾಳುವಂಥಾದ್ದು. ಇದರಿಂದ 35 ಲಕ್ಷ ರೂಪಾಯಿ ತೆರಿಗೆ ಹಾಳಾಗುತ್ತಿದೆ.

ಶ್ರೀ ಧರ್ಮಸಿಂಗ್ : ತುಮಕೂರು ರಸ್ತೆಯಲ್ಲಿ ಲಾರಿಗಳನ್ನು ಹಿಡಿದಿರತಕ್ಕಂಥಾದ್ದು ನನ್ನ ಗಮನಕ್ಕೂ ಬಂದಿದೆ. ಅದನ್ನು ಬಿಡಲಿಕ್ಕೆ ಹೋಗಿಲ್ಲ. ಕ್ರಮ ತೆಗೆದುಕೊಂಡಿದ್ದೇವೆ. ಹಿಡಿದು ಸೀಜ್ ಮಾಡಿದ್ದೇವೆ.